"ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ರ ಕರ್ನಾಟಕ ಶರೀರ ರಚನಾ ಶಾಸ್ತ್ರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು...

*ಪ್ರಸ್ತಾವ ಅಂಗೀಕರಿಸಲ್ಪಟ್ಟಿತು*

*ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು*

ಖಂಡ 2ಮತ್ತು 3ರವರೆಗೆ

**ಅಧ್ಯಕ್ಷರು** : "ಖಂಡ 2ಮತ್ತು 3 ರವರೆಗೆ ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ"

*ಪ್ರಸ್ತಾವ ಅಂಗೀಕರಿಸಲ್ಪಟ್ಟಿತು*

*(ಖಂಡ 2 ಮತ್ತು 3ರವರೆಗೆ ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)*

ಖಂಡ 1 ಇತ್ಯಾದಿ

**ಅಧ್ಯಕ್ಷರು** : ಪ್ರಸ್ತಾವ ಏನೆಂದರೆ :

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

*ಪ್ರಸ್ತಾವ ಅಂಗೀಕರಿಸಲ್ಪಟ್ಟಿತು*

*(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)*

*ಪ್ರಸ್ತಾವದ ಅಂಗೀಕಾರ*

**ಡಾ. ಎಂ. ಶಂಕರ ನಾಯಕ್** (ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಮಂತ್ರಿ) : ಮಾನ್ಯ ಅಧ್ಯಕ್ಷರೆ, "ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ನೇ ಸಾಲಿನ ಕರ್ನಾಟಕ ಶರೀರ ರಚನಾ ಶಾಸ್ತ್ರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೊರುತ್ತೇನೆ.

**ಅಧ್ಯಕ್ಷರು** : ಪ್ರಸ್ತಾವ ಏನೆಂದರೆ :

"ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ನೇ ಸಾಲಿನ ಕರ್ನಾಟಕ ಶರೀರ ರಚನಾ ಶಾಸ್ತ್ರ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

*ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು*

(೫) ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ತಿದ್ದುಪಡಿ)ವಿಧೇಯಕ1999

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ. ಎಂ. ಪಿ. ಪ್ರಕಾಶ್** (ಮಾನ್ಯ ಗ್ರಾಮೀಣಾಭಿವೃದ್ಧಿ, ವಾರ್ತಾ ಮತ್ತು ಪ್ರಚಾರ ಇಲಾಖಾ ಮಂತ್ರಿ) : ಮಾನ್ಯ ಅಧ್ಯಕ್ಷರೆ, "ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

*ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು*

**ಶ್ರೀ. ಎಂ. ಪಿ. ಪ್ರಕಾಶ್** : ಮಾನ್ಯ ಅಧ್ಯಕ್ಷರೆ, ಇದೊಂದು ಬಹಳ ಸರಳವಾಗಿರತಕ್ಕ ತಿದ್ದುಪಡಿ. ಈಗ ಇರುವಂತಹ ಅಧಿಕಾರೇತರ ಐದು ಮಂದಿ ಸದಸ್ಯರಲ್ಲಿ ಇಬ್ಬರು ಮಹಿಳೆಯರು ಇರಬೇಕು ಎನ್ನುವಂತಹ ವಿಚಾರವನ್ನು ಮಾತ್ರ ಇದರಲ್ಲಿ ಸೇರಿಸುತ್ತಿದ್ದೇವೆ. ಆದ್ದರಿಂದ ದಯಮಾಡಿ ಸದನ ಅದಕ್ಕೆ ಒಪ್ಪಿಗೆ ನೀಡಬೇಕೆಂದು ಕೋರುತ್ತೇನೆ.

**ಶ್ರೀಮತಿ ಪ್ರಮೀಳಾ ನೇಸರ್ಗಿ** (ಚಾಮರಾಜ ಪೇಟೆ) : ಎಲ್ಲಾ ಬೋರ್ಡ್‌ಗಳಿಗೂ ಇದೇ ತರಹ ತರಬೇಕು. ಬರೇ ಹೌಸಿಂಗ್ ಬೋರ್ಡಿಗೆ ಮಾತ್ರ ತಂದಿದ್ದಾರೆ, ಎಲ್ಲಾ ಕಡೆ ನಾಮಿನೇಷನ್ಸ್ ಮಾಡತಕ್ಕ ಸಂದರ್ಭದಲ್ಲಿ ಮಹಿಳೆಯರಿಗೆ ಅವಕಾಶ ನೀಡಬೇಕು ಎಂದು ಹೇಳುತ್ತೇನೆ.

**ಅಧ್ಯಕ್ಷರು** : ಪ್ರಸ್ತಾವ ಏನೆಂದರೆ, "1999ರ ಕರ್ನಾಟಕ ಗೃಹ ನಿರ್ಮಾಣ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

*ಪ್ರಸ್ತಾವ ಅಂಗೀಕರಿಸಲ್ಪಟ್ಟಿತು*

*ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು*

ಖಂಡ 2

**ಅಧ್ಯಕ್ಷರು** : "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

*ಪ್ರಸ್ತಾವ ಅಂಗೀಕರಿಸಲ್ಪಟ್ಟಿತು*

*(ಖಂಡ 2ನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)*

ಖಂಡ 1 ಇತ್ಯಾದಿ

**ಅಧ್ಯಕ್ಷರು** : ಪ್ರಸ್ತಾವ ಏನೆಂದರೆ 'ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

*ಪ್ರಸ್ತಾವ ಅಂಗೀಕರಿಸಲ್ಪಟ್ಟಿತು*

*(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)*

*ಪ್ರಸ್ತಾವದ ಅಂಗೀಕಾರ*

**ಶ್ರೀ ಎಂ.ಪಿ. ಪ್ರಕಾಶ್** (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) (ವಸತಿ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, "1999ರ ಕರ್ನಾಟಕ ಗೃಹ ನಿರ್ಮಾಣ ಮಂಡಳಿ (ತಿದ್ದುಪಡಿ)ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

**ಅಧ್ಯಕ್ಷರು** : ಪ್ರಸ್ತಾವ ಏನೆಂದರೆ, '1999ರ ಕರ್ನಾಟಕ ಗೃಹ ನಿರ್ಮಾಣ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು

*ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು*

(ಈ) ಕರ್ನಾಟಕ ಅಬ್ಕಾರಿ (ಎರಡನೇ ತಿದ್ದುಪಡಿ) ವಿಧೇಯಕ, 1998

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಜಯವಂತ ಸುಬ್ರಾಯ** (ಅಬ್ಕಾರಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ನೇ ಕರ್ನಾಟಕ ಅಬ್ಕಾರಿ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

*ಪ್ರಸ್ತಾವ ಮಂಡಿಸಲ್ಪಟ್ಟಿತು*

**ಶ್ರೀ ಜಯವಂತ ಸುಬ್ರಾಯ** (ಅಬ್ಕಾರಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ವಿಧೇಯಕದ ಉದ್ದೇಶವೇನೆಂದರೆ, ಅಬ್ಕಾರಿ ಇಲಾಖೆಯಲ್ಲಿ ಅಪರಾಧಗಳನ್ನು ಕನಿಷ್ಠ ಪ್ರಮಾಣಕ್ಕೆ ತರಲು ಒಂದು ವಿವರಣಾ ಕ್ರಮವಾಗಿ ಕರ್ನಾಟಕ ಅಬ್ಕಾರಿ ಅಧಿನಿಯಮ 45ನೇ ಪ್ರಕರಣದ ಅಡಿಯಲ್ಲಿ ಪ್ರತಿಯೊಂದು ಅಪರಾಧಕ್ಕಾಗಿ ಕನಿಷ್ಠ ಐದು ಸಾವಿರ ರೂಪಾಯಿಗಳು ಮತ್ತು ಗರಿಷ್ಠ ಇಪ್ಪತ್ತೈದು ಸಾವಿರ ರೂಪಾಯಿಗಳ ದಂಡವನ್ನು ನಿಗದಿಪಡಿಸಲು ಉದ್ದೇಶಿಸಲಾಗಿದೆ. ಪ್ರಸ್ತುತ ಈ ಪ್ರಕರಣದಡಿಯಲ್ಲಿ ಕೇವಲ ಐದು ಸಾವಿರ ರೂಪಾಯಿಗಳವರೆಗೆ ಗರಿಷ್ಠ ದಂಡವನ್ನು ವಿಧಿಸಲಾಗುತ್ತದೆ. ಆದರಂತೆ, 1999-2000ನೇ ಇಸವಿಯ ಆಯವ್ಯಯ ಪತ್ರದಲ್ಲಿ ಈ ಸಂಬಂಧದ ಕಾರ್ಯನೀತಿಯೊಂದನ್ನು ಪ್ರಕಟಿಸಲಾಗಿದೆ ಮತ್ತು ಇದಕ್ಕೆ ಆಯವ್ಯಯದಲ್ಲಿ ಈಗಾಗಲೇ ಮಂಜೂರಾತಿಯಾಗಿರುತ್ತದೆ. ವಿಧಾನ ಪರಿಷತ್ತಿನಲ್ಲೂ ಕೂಡ ಈ ವಿಧೇಯಕವನ್ನು ಮಂಡಿಸಲ್ಪಟ್ಟಿದ್ದು ಅಂಗೀಕೃತವಾಗಿರುತ್ತದೆ. ಸದರಿ ವಿಧೇಯಕದ ಮುಖಾಂತರ ಅಬ್ಕಾರಿ ಇಲಾಖೆಯ ಅಪರಾಧಗಳನ್ನು ಕಡಿಮೆ ಮಾಡಬೇಕು ಮತ್ತು ಶಿಕ್ಷೆಯನ್ನೂ ಸಹ ಸ್ವಲ್ಪ ಹೆಚ್ಚು ಪ್ರಮಾಣದಲ್ಲಿ ಮಾಡುವುದರಿಂದ ಶಿಸ್ತುಬದ್ಧವಾದ ಆರ್ಥಿಕ ನೀತಿಯನ್ನು ರೂಪಿಸಿದಂತಾಗುತ್ತದೆನ್ನುವ ಉದ್ದೇಶದಿಂದ ವಿಧೇಯಕಕ್ಕೆ ತಿದ್ದುಪಡಿ ತರಲಾಗಿದೆ. ಈ ವಿಷಯವಾಗಿ ಬಹಳಷ್ಟು ಅನೇಕ ಹಿರಿಯ ಮಾನ್ಯ ಸದಸ್ಯರುಗಳು ಮಾತನಾಡಿ ಅಬ್ಕಾರಿ ಇಲಾಖೆಯಲ್ಲಿ ಕಟ್ಟುನಿಟ್ಟಿನ ಕ್ರಮಗಳನ್ನು ತರುವುದರೊಂದಿಗೆ ಅಪರಾಧಗಳನ್ನು ಕಡಿಮೆ ಮಾಡಲು ಪ್ರಯತ್ನಿಸಬೇಕೆಂದು ಸಲಹೆ-ಸೂಚನೆಗಳನ್ನು ಕೊಟ್ಟಿರುವುದನ್ನು ಗಮನದಲ್ಲಿಟ್ಟುಕೊಂಡು ಸದರಿ ಅಧಿನಿಯಮಕ್ಕೆ ತಾವುಗಳು ಮಂಜೂರಾತಿ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಮಲ್ಲಿಕಾರ್ಜುನ ಖರ್ಗೆ** (ವಿರೋಧ ಪಕ್ಷದ ನಾಯಕರು) : ಐದು ಸಾವಿರ ರೂಪಾಯಿಗಳವರೆಗೆ ಇದ್ದ ದಂಡವನ್ನು ಗರಿಷ್ಠ ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ತಾವು ಹೆಚ್ಚಿಸಿದ್ದೀರಿ. ಆದರೆ, ಇದರಲ್ಲಿ ಪೆನಾಲ್ಟಿ ಹಾಕತಕ್ಕಂಥದ್ದಾಗಲಿ ಅಥವಾ ಪೀನಲ್ ಕ್ಲಾಸ್ ತಂದರೆ ವಾಸಿ. ಎಕ್ಸೈಜ್‌ನವರಿಗೆ ಹಣವೇನೂ ಅಂತಹ ದೊಡ್ಡದಲ್ಲ. ದಂಡದ ಜೊತೆಗೆ ಇಂಪ್ರಿಸನ್‌ಮೆಂಟ್ ಸ್ವಲ್ಪ ಇದ್ದರೆ ಹೆದರಿಕೆ ಇರುತ್ತದೆ. ಇಲ್ಲದಿದ್ದರೆ, ಸೆಕೆಂಡ್ಸ್, ಥರ್ಡ್ಸ್ ಮಾರುವವರು, ಅನಂತರ ಕೊಲ್ಯೂಶನ್ ಆಫ್ ಅವರ್ ಓನ್ ಎಕ್ಸೈಜ್ ಇನ್ಸ್‌ಪೆಕ್ಟರ್, ಡಿವೈಎಸ್‌ಪಿ ಅಥವಾ ಫ್ಯಾಕ್ಟರಿ ಮೇಲೆ ಏನು ಹಾಕುತ್ತೀರಿ, ಅವರೆಲ್ಲರೂ ಒಂದಾಗಿ ಎಷ್ಟೋ ಅಪರಾಧಗಳನ್ನು ಮಾಡುವುದರಿಂದ ಅವರಿಗೆ ಯಾರೂ ಶಿಕ್ಷೆ ಕೊಡುವುದಕ್ಕಾಗುವುದಿಲ್ಲ